**ದಿನಾಂಕಃ13.01.2026 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ.ಎ., ವಕೀಲರಿಂದಃ**

ಪ್ರತಿವಾದಿಗಳೊಂದಿಗೆ ಬಹಳ ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸರಿ. ನನ್ನ ಹಾಗೂ ಪ್ರತಿವಾದಿಗಳು ನಡುವೆ ಕ್ರಿಮಿನಲ್ ಪ್ರಕರಣಗಳು ಚಾಲ್ತಿಯಲ್ಲಿವೆ ಎಂದರೆ ಸರಿ. ಮುರಳಿ ನನ್ನ ಮಗ. ನನ್ನ ಮಗ ಮುರಳಿ ನಾಗನಾಯಕನಹಳ್ಳಿ ಗ್ರಾಮದಲ್ಲಿ ಒಂದು ಮಹಿಳೆಯನ್ನು ಕೊಲೆ ಮಾಡಿದ್ದ ಪ್ರಕರಣದಲ್ಲಿ ಒಂದು ವರ್ಷಗಳ ಕಾಲ ಜೈಲಿನಲ್ಲಿದ್ದ ಎಂದರೆ ಸರಿ, ಆದರೆ ಅದು ಸುಳ್ಳು ಪ್ರಕರಣವಾಗಿರುತ್ತದೆ.

ಚಿಕ್ಕಮುನಿಸ್ವಾಮಿ ನನ್ನ ತಾತ ಎಂದರೆ ಸರಿ. ಚಿಕ್ಕಮುನಿಸ್ವಾಮಿ ಮತ್ತು ದೊಡ್ಡ ಮುನಿಸ್ವಾಮಿ ಅಣ್ಣ ತಮ್ಮಂದಿರು ಎಂದರೆ ಸರಿ, ಆದರೆ ದೊಡ್ಡಮುನಿಸ್ವಾಮಿರವರಿಗೆ ನಮಗೆ ಯಾವುದೇ ಸಂಬಂಧವಿಲ್ಲ. ಪ್ರತಿವಾದಿಗಳು ನಮ್ಮ ವಿರುದ್ದ ಓ ಎಸ್ ನಂ.179/2016 ರಲ್ಲಿದಾವೆ ಹೂಡಿದ್ದಾರೆ ಎಂದರೆ ಸರಿ. ಆ ದಾವೆಯು ಸರ್ವೇ ನಂಬರ್ 15/4 ಮತ್ತು 14 ಕ್ಕೆ ಸಂಬಂಧಪಟ್ಟಿದೆ ಎಂದರೆ ಸರಿ. ಸರ್ವೇ ನಂಬರ್ 15/4 ಮತ್ತು 14 ನನ್ನ ತಾತ ಚಿಕ್ಕಮುನಿಸ್ವಾಮಿ ಮತ್ತು ದೊಡ್ಡಮುನಿಸ್ವಾಮಿ ರವರು ಜಂಟಿಯಾಗಿ ಚಿಕ್ಕಮುನಿಸ್ವಾಮಿ ರವರ ಹೆಸರಿಗೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಇಬ್ಬರು ಅಣ್ಣತಮ್ಮಂದಿರು ಜಂಟಿಯಾಗಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದೊಡ್ಡಮುನಿಸ್ವಾಮಿ ರವರಿಗೆ ಈರಪ್ಪ ಎನ್ನುವವರು ಒಬ್ಬನೇ ಮಗ ಎಂದರೆ ನನಗೆ ಗೊತ್ತಿಲ್ಲ . ಚಿಕ್ಕಮುನಿಸ್ವಾಮಿ ರವರಿಗೆ ಇಬ್ಬರು ಮಕ್ಕಳು ಒಬ್ಬ ಮುನಿಸ್ವಾಮಿ ಮತ್ತು ವೀರಪ್ಪ ಎಂದರೆ ಸರಿ.

ಸುಮಾರು 60 ವರ್ಷಗಳ ಹಿಂದೆ ದೊಡ್ಡಮುನಿಸ್ವಾಮಿ ರವರ ಮಕ್ಕಳು ಮತ್ತು ಚಿಕ್ಕ ಮುನಿಸ್ವಾಮಿ ಮಕ್ಕಳು ಈ ಎರಡು ಆಸ್ತಿಗಳನ್ನು ತಮ್ಮಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ವಿಭಾಗ ಮಾಡಿಕೊಂಡಿದ್ದರೂ ಸಹಾ ಖಾತೆ ಬದಲಾವಣೆ ಆಗದೇ ಇದ್ದ ಕಾರಣ 1980 ರಲ್ಲಿ ಮತ್ತೊಮ್ಮೆ ಒಂದು ಮೂಜುಬಾನೆ ವಿಭಾಗ ಪತ್ರವನ್ನು

ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 31.12.1980 ರಲ್ಲಿ ಮಾಡಿಕೊಂಡಂತಹ ವಿಭಾಗ ಪತ್ರದಲ್ಲಿ ಸರ್ವೇ ನಂಬರ್ 15/4 ಮತ್ತು 14 ರಲ್ಲಿ ಎರಡೂ ಆಸ್ತಿಗಳಲ್ಲಿ ಉತ್ತರದ ಅರ್ಧ ಹಿಸ್ಸೆಯನ್ನು ದೊಡ್ಡಮುನಿಸ್ವಾಮಿ ರವರ ಮಗ ಈರಪ್ಪನಿಗೆ ಸೇರಿತ್ತು ಎಂದರೆ ಸರಿಯಲ್ಲ. ದಕ್ಷಿಣದ ಅರ್ಧ ಭಾಗ ನನ್ನ ತಂದೆ ಮುನಿಸ್ವಾಮಿ ಮತ್ತು ಚಿಕ್ಕಪ್ಪ ವೀರಪ್ಪನಿಗೆ ಬಂದಿತ್ತು ಎಂದರೆ ಸರಿಯಲ್ಲ. ದಿಃ31.12.1980 ರಲ್ಲಿ ಮಾಡಿಕೊಂಡಂತಹ ವಿಭಾಗ ಪತ್ರದ ಮೂಲಕ ಹಿಸ್ಸೆದಾರರು ಖಾತೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಅದು ಪೊರ್ಜರಿ ಮಾಡಿದ್ದ ದಾಖಲೆ. ಈ ರೀತಿ ಪೊರ್ಜರಿ ಮಾಡಿದ್ದ ಬಗ್ಗೆ ಪೊಲೀಸ್ ದೂರನ್ನು ನೀಡಿಲ್ಲ. ನನ್ನ ತಂದೆಯವರು ಸಹಿ ಮಾಡುತ್ತಿದ್ದು ವಿಭಾಗ ಪತ್ರದಲ್ಲಿ ಹೆಬ್ಬೆಟ್ಟಿನ ಗುರುತು ಪೊರ್ಜರಿ ಮಾಡಿದ್ದ.

ನಾನು ಅನಕ್ಷರಸ್ಥ. ದೊಡ್ಡಮುನಿಸ್ವಾಮಿ ರವರ ಮಗ ಈರಪ್ಪ ರವರು ಅಂದರೆ 1 ನೇ ಪ್ರತಿವಾದಿಯ ಗಂಡ ಸುಮಾರು 20 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಎಂದರೆ ಸರಿ. ಈರಪ್ಪ ಮರಣ ಹೊಂದಿದ್ದ ನಂತರ ಆತನ ಹಿಸ್ಸೆಯನ್ನು ಪ್ರತಿವಾದಿಗಳು ಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿ, ಆದರೆ ಸಳ್ಳು ದಾಖಲೆಗಳ ಆಧಾರದ ಮೇಲೆ ಮಾಡಿಕೊಂಡಿದ್ದಾರೆ.

ನನ್ನ ಚಿಕ್ಕಪ್ಪ ವೀರಪ್ಪ ರವರ ಸರ್ವೇ ನಂಬರ್ 14 ರಲ್ಲಿ 11 ಗುಂಟೆ ಜಮೀನನ್ನು ಒಬ್ಬ ರಾಮಚಂದ್ರೇಗೌಡ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ದಿಃ23.07.1997 ರಂದು ಸರ್ವೇ ನಂಬರ್ 14 ರ ಒಂದು ಎಕರೆ 35 ಪೈಕಿ 37½ ಗುಂಟೆಯ ಜಮೀನನ್ನು ಗೋಪಾಲಗೌಡ ಬಿನ್ ದಿನ್ನೂರು ಮುನಿಸ್ವಾಮಿ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ದಿಃ17.07.2003 ರಲ್ಲಿ ಈರಪ್ಪನ ಮಕ್ಕಳು ಗೋಪಾಲಗೌಡ ರವರಿಗೆ ಮರವಿ 37½ ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದಿಃ 31.12.2007 ರಲ್ಲಿ ಈರಪ್ಪ ಮತ್ತು ಅವರ ಮಕ್ಕಳು ಸರ್ವೇ ನಂಬರ್ 14

ರ ಒಂದು ಎಕರೆ 35 ಪೈಕಿ 37½ ಗುಂಟೆಯ ಜಮೀನನ್ನು ಗೌಡಹಳ್ಳಿ ಮುನಿವೆಂಕಟಪ್ಪ ಬಿನ್ ಬೈರಪ್ಪ ರವರಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ದಿ:14.09.2015 ರಲ್ಲಿ ಈರಪ್ಪನ ಮಕ್ಕಳು ಗೌಡಹಳ್ಳಿ ಮುನಿವೆಂಕಟಪ್ಪ ಬಿನ್ ಬೈರಪ್ಪ ರವರಿಗೆ ಮರಳಿ 37½ ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವ್ಯವಹಾರಗಳಲ್ಲಿ ನಾನು ಮತ್ತು ಬೇರೆ ವಾದಿಗಳು ಆಕ್ಷೇಪಣೆ ವ್ಯಕ್ತಪಡಿಸಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರಲಿಲ್ಲ.

ಪ್ರತಿವಾದಿಗಳು ಸಗಿರಿ ಆಸ್ತಿಯ ಹಿಸ್ಸೆಯ ಮೇಲೆ ಅಡಮಾನ ಮಾಡಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ಚಿಕ್ಕಮುನಿಸ್ವಾಮಿ ರವರ ಮಗ ವೀರಪ್ಪನಿಗೆ ಬಂದಂತಹ ಹಿಸ್ಸೆ 11 ಗುಂಟೆ ಜಮೀನನ್ನು ರಾಮಚಂದ್ರೇಗೌಡ ರವರಿಗೆ ಮಾರಾಟ ಮಾಡಿದ್ದು ಅವರ ಹೆಸರಿನಲ್ಲಿ ಖಾತೆ ಪಹಣಿ ಬರುತ್ತಿದೆ ಎಂದರೆ ಸರಿ, ಆದರೆ ಅದು ಸುಳ್ಳು ದಾಖಲೆಯಾಗಿರುತ್ತದೆ.

ನನ್ನ ತಂದೆ ಪ್ರತಿವಾದಿಗಳ ವಿರುದ್ದ ಆರ್ ಎ ನಂ 552/2016.17 ರಲ್ಲಿ ಎಸಿ ನ್ಯಾಯಾಲಯಲ್ಲಿ ಮನವಿ ಸಲ್ಲಿಸಿದ್ದರು ಎಂದರೆ ಸರಿ. ಆ ಮನವಿಯು ದಿ: 24.03.2023 ರಲ್ಲಿ ವಜಾಗೊಂಡಿದೆ ಎಂದರೆ ಸರಿಯಲ್ಲ. ಆರ್ ಎ ನಂ.270/2016 ರಲ್ಲಿ ಮತ್ತೊಂದು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಅದು ಸಹಾ ದಿ:19.12.2023 ರಲ್ಲಿ ವಜಾಗೊಂಡಿದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ ಅರ್ಧ ಹಿಸ್ಸೆ ಹೋಗಿದ್ದಕ್ಕೆ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಗಳಲ್ಲಿ ನಮಗೆ ಬಂದಂತಹ ದಕ್ಷಿಣದ ಅರ್ಧ ಹಿಸ್ಸೆಯಲ್ಲಿ ಸಾವಧೀನದಲ್ಲಿದ್ದು ಸಂಪೂರ್ಣ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

ಉತ್ತರದ ಅರ್ಧ ಭಾಗದಲ್ಲಿ ಪ್ರತಿವಾದಿಗಳು ಮನೆ ಮತ್ತು ದೇವಸ್ಥಾನದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಸದರಿ ಆಸ್ತಿಗಳನ್ನು ನಮ್ಮ ತಾತನ ಹೆಸರಿನಲ್ಲಿ ಖರೀದಿ ಮಾಡಿದ್ದು ಆದರೆ ಅದರ ಮೊಬಲಗಳನ್ನು ಚಿಕ್ಕಮುನಿಸ್ವಾಮಿ ಮತ್ತು ದೊಡ್ಡಮುನಿಸ್ವಾಮಿ ಇಬ್ಬರು ಸೇರಿ ನೀಡಿದ್ದರು ಎಂದರೆ ಸರಿಯಲ್ಲ. ಸ್ವಾಧೀನದಲ್ಲಿ ಪ್ರತಿವಾದಿಗಳು ಇದ್ದರೂ ಸಹಾ ಯಾವುದೇ ವ್ಯಾಜ್ಯಕಾರಣ ಇಲ್ಲದೆ 2015 ರಲ್ಲಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.